**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಗೋವಿಂದರಾಜು ರವರು ಶೂನ್ಯ ವೇಳೆಯಲ್ಲಿ ಮಾನ್ಯ ಇಲಾಖಾ ಸಚಿವರ ಗಮನಕ್ಕೆ ತರಲು ಅನುಮತಿ ನೀಡುವ ಪ್ರಶ್ನೆಗೆ ಉತ್ತರ ಸಲ್ಲಿಸುವ ಬಗ್ಗೆ.**

**ವಿಷಯ**

ರಾಜ್ಯದಲ್ಲಿರುವ ದೃಷ್ಟಿಹೀನ, ಶ್ರವಣದೋಷ, ಬುದ್ಧಿಮಾಂದ್ಯತೆಯುಳ್ಳ ಸಾವಿರಾರು ವಿದ್ಯಾರ್ಥಿಗಳ ಶೈಕ್ಷಣಿಕಯಾತನೆಯನ್ನು ಕೇಳೋರಿಲ್ಲವೆಂಬಂತಾಗಿದೆ.

ವಿಶೇಷಚೇತನರಿಗೆಂದು ಪ್ರತ್ಯೇಕವಾಗಿ ರಾಜ್ಯದ 08 ಕಡೆ ಸರ್ಕಾರಿ, 34 ಕಡೆ ಅನುದಾನಿತ ವಿಶೇಷ ಶಾಲೆಗಳನ್ನು ದಶಕಗಳ ಹಿಂದೆಯೇ ಆರಂಭಿಸಿದ ಸರಕಾರ ಅಗತ್ಯ ಸಿಬ್ಬಂದಿ ಮಾತ್ರ ನೀಡಿಲ್ಲ. 80ರ ದಶಕದಲ್ಲಿ ಆರಂಭಗೊಂಡ ವಿಶೇಷ ಶಾಲೆಗಳಲ್ಲಿ ಮಂಜೂರು ಹುದ್ದೆಗಳಲ್ಲಿ ಬಹುತೇಕರು ನಿವೃತ್ತರಾಗಿದ್ದಾರೆ. ಖಾಲಿಯಾದ ಈ ಹುದ್ದೆಗಳ ನೇಮಕ ಪ್ರಕ್ರಿಯೆ, ನಿವೃತ್ತರಾದವರಿಗೆ ಪಿಂಚಣಿ ಸೌಲಭ್ಯ ಸೇರಿದಂತೆ ಯಾವುದೇ ಪರ್ಯಾಯ ಕ್ರಮಗಳಿಲ್ಲದಂತಾಗಿ ವಿಶೇಷ ಚೇತನರು ತೀವ್ರ ಸಮಸ್ಯೆಗೀಡಾಗುತ್ತಿದ್ದಾರೆ.

ಇಲಾಖೆ ಮಾಹಿತಿ ಪ್ರಕಾರ ಅಂಧ ಮಕ್ಕಳಿಗೆ 1:12 ಶ್ರವಣದೋಷವುಳ್ಳವರಿಗೆ 1:10, ಬುದ್ಧಿಮಾಂದ್ಯತೆಯ ಮಕ್ಕಳಿಗೆ 1:7 ಅನುಪಾತದಂತೆ ಶಿಕ್ಷಕರನ್ನು ನೀಡಬೇಕಿದೆ. ಆದರೆ ರಾಜ್ಯದ್ಯಂತ 100 ದಾಖಲಾತಿ ಹೊಂದಿದ ಶಾಲೆಗೆ ಕೇವಲ 03 ರಿಂದ 04 ಸಿಬ್ಬಂದಿಯನ್ನಷ್ಟೇ ನೀಡಲಾಗಿದ್ದು, ವಿಶೇಷ ಕಾಳಜಿ ನಿರೀಕ್ಷೆಯಲ್ಲಿರುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಜತೆಗೆ, ವಿಶೇಷ ಶಾಲೆಗಳಿಗೆ ಮಂಜೂರಾದ 360 ಹುದ್ದೆ ಪೈಕಿ 145 ಸ್ಥಾನ ಖಾಲಿ ಉಳಿದಿದ್ದು, ಕೆಲ ವರ್ಷಗಳಲ್ಲೇ ಮತ್ತಷ್ಟು ಮಂದಿ ನಿವೃತ್ತರಾಗಲಿದ್ದಾರೆ. ಈ ಹುದ್ದೆಗಳಿಗೆ ಶಿಕ್ಷಕರಿಲ್ಲವೆಂಬ ಕೊರತೆ ಒಂದೆಡೆಯಾಗಿದ್ದರೆ ವಿಶೇಷ ಚೇತನ ಮಕ್ಕಳಿಗೆ ಬೋಧಿಸುವ ಕೌಶಲ್ಯ ನೀಡುವ ತರಬೇತಿ ಸಂಸ್ಥೆಯು ರಾಜ್ಯದಲ್ಲಿಲ್ಲ. ಹೀಗಾಗಿ ಸರಕಾರ ವಿಶೇಷ ಚೇತನರಿಗೆ ಬೋಧಿಸುವ ಶಿಕ್ಷಕರ ತರಬೇತಿ, ವಿಶೇಷ ಶಾಲೆಗಳಿಗೆ ಸಿಬ್ಬಂದಿ ನಿಯೋಜನೆಯೊಂದಿಗೆ ಈ ವಲಯದ ಶಿಕ್ಷಕರ ವೇತನ, ಪಿಂಚಣಿ ಸಮಸ್ಯೆಗಳನ್ನು ಪರಿಹರಿಸಬೇಕಾಗಿರುವುದರಿಂದ, ಈ ವಿಷಯವನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಲ್ಲಿ ಶೂನ್ಯ ವೇಳೆಯಲ್ಲಿ ಅವರ ಗಮನಕ್ಕೆ ತರಲು ಅನುಮತಿ ನೀಡಬೇಕೆಂದು ಕೋರುತ್ತೇನೆ.

**ಉತ್ತರ**

ರಾಜ್ಯದಲ್ಲಿರುವ ವಿಕಲಚೇತನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅಂಧ ಮಕ್ಕಳಿಗಾಗಿ 04 ಹಾಗೂ ಶ್ರವಣದೋಷವುಳ್ಳ ಮಕ್ಕಳಿಗೆ 05 ಒಟ್ಟು 09 ಸರ್ಕಾರಿ ಶಾಲೆಗಳನ್ನು ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ 447 ಮಕ್ಕಳು ದಾಖಲಾಗಿದ್ದು, 65 ಶಿಕ್ಷಕರು ಹಾಗೂ 40 ಶಿಕ್ಷಕೇತರರು ಒಟ್ಟು 105 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಶಾಲೆಗಳಲ್ಲಿ ಪ್ರಸ್ತುತ ದಾಖಲಾಗಿರುವ ಮಕ್ಕಳ ಹಾಗೂ ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ. | ಸರ್ಕಾರಿ ಅಂಧ ಮಕ್ಕಳ ಶಾಲೆಗಳ ಸಂಖ್ಯೆ | ಮಂಜೂರಾದ ಹುದ್ದೆಗಳ ಸಂಖ್ಯೆ | | ಭರ್ತಿಯಾಗಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ (ಅಂಶಕಾಲಿಕ ಸಿಬ್ಬಂದಿ ಸೇರಿದಂತೆ) | | ಮಂಜೂರಾದ ಮಕ್ಕಳ ಸಂಖ್ಯೆ | ದಾಖಲಾದ ಮಕ್ಕಳ ಸಂಖ್ಯೆ |
|---|---|---|---|---|---|---|---|
| | | ಶಿಕ್ಷಕರು | ಶಿಕ್ಷಕೇತರರು | ಶಿಕ್ಷಕರು | ಶಿಕ್ಷಕೇತರರು | | |
| 01 | 04 | 58 | 55 | 41 | 22 | 355 | 143 |
| | ಸರ್ಕಾರಿ ಕಿವುಡು ಮಕ್ಕಳ ಶಾಲೆಗಳ ಸಂಖ್ಯೆ | | | | | | |
| 02 | 05 | 36 | 48 | 24 | 18 | 426 | 304 |
| | **09** | **94** | **103** | **65** | **40** | **781** | **447** |

ಈ ಶಾಲೆಗಳಲ್ಲಿ ಪ್ರಸ್ತುತ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ಅಂಶಕಾಲಿಕ ಅರ್ಹ ಶಿಕ್ಷಕರನ್ನು ಪಡೆದು ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ.

1982ರ ರಾಜ್ಯ ಅನುದಾನದ ಸಂಹಿತೆಯಡಿ 29 ವಿಶೇಷ ಶಾಲೆಗಳು ಹಾಗೂ 05 ತರಬೇತಿ ಕೇಂದ್ರಗಳು ಸೇರಿ ಒಟ್ಟು 34 ಶಾಲೆ / ಕೇಂದ್ರಗಳು ನಡೆಯುತ್ತಿದ್ದು, ಈ ಶಾಲೆಗಳಲ್ಲಿ 1701 ಮಕ್ಕಳು ದಾಖಲಾಗಿದ್ದು, 132 ಶಿಕ್ಷಕರು ಹಾಗೂ 73 ಶಿಕ್ಷಕೇತರ ಸಿಬ್ಬಂದಿಗಳು ಸೇರಿ ಒಟ್ಟು 205 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಶಾಲೆಗಳಲ್ಲಿ ಪ್ರಸ್ತುತ ದಾಖಲಾಗಿರುವ ಮಕ್ಕಳ ಹಾಗೂ ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ. | ವಿಕಲತೆ ವಿಧ | ಶಾಲೆಯ ಸಂಖ್ಯೆ | ಮಂಜೂರಾದ ಹುದ್ದೆಗಳ ಸಂಖ್ಯೆ | | ಭರ್ತಿಯಾದ ಹುದ್ದೆಗಳ ಸಂಖ್ಯೆ | | ಮಂಜೂರಾದ ಮಕ್ಕಳ ಸಂಖ್ಯೆ | ದಾಖಲಾದವರ ಸಂಖ್ಯೆ |
|---|---|---|---|---|---|---|---|---|
| | | | ಶಿಕ್ಷಕರು | ಶಿಕ್ಷಕೇತರ | ಶಿಕ್ಷಕರು | ಶಿಕ್ಷಕೇತರ | | |
| 1 | ದೃಷ್ಟಿದೋಷವುಳ್ಳ ಮಕ್ಕಳ ಶಾಲೆ | 10 | 83 | 44 | 43 | 29 | 727 | 393 |
| 2 | ಶ್ರವಣದೋಷವುಳ್ಳ ಮಕ್ಕಳ ಶಾಲೆ | 07 | 69 | 31 | 41 | 15 | 642 | 477 |
| 3 | ದೈಹಿಕ ವಿಕಲಚೇತನರ ಶಾಲೆ | 01 | 07 | 07 | 04 | 04 | 116 | 63 |
| 4 | ಬುದ್ಧಿಮಾಂದ್ಯ ಮಕ್ಕಳ ಶಾಲೆ | 11 | 90 | 39 | 39 | 21 | 850 | 768 |
| 5 | ತರಬೇತಿ ಕೇಂದ್ರಗಳು | 05 | 22 | 10 | 05 | 04 | 0 | 0 |
| | **ಒಟ್ಟು** | **34** | **205** | **131** | **132** | **73** | **2335** | **1701** |

ಈ ಕೊರತೆಯಿರುವ ಶಿಕ್ಷಕ / ಶಿಕ್ಷಕೇತರ ಹುದ್ದೆಗಳನ್ನು 1982ರ ರಾಜ್ಯ ಅನುದಾನ ಸಂಹಿತೆಯ ಮಾರ್ಗಸೂಚಿಯಂತೆ ಭರ್ತಿ ಮಾಡಲು ಕ್ರಮವಹಿಸಿದೆ.

1982ರ ರಾಜ್ಯ ಅನುದಾನ ಸಂಹಿತೆಯಡಿ 27 ವಿಶೇಷ ಶಾಲೆಗಳು/ತರಬೇತಿ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ನಡೆಯುತ್ತಿದ್ದು, ಸದರಿ ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸಿದ 55 ಸಿಬ್ಬಂದಿಗಳ ಪೈಕಿ ಈಗಾಗಲೇ ಪಿಂಚಣಿ ಮಂಜೂರಾತಿಗಾಗಿ 24 ಸಿಬ್ಬಂದಿಗಳ ಸೇವಾ ವಹಿಯೊಂದಿಗೆ ಪ್ರಸ್ತಾವನೆಯನ್ನು ಪಿಂಚಣಿ ಮಂಜೂರಾತಿಗಾಗಿ ಮಹಾಲೇಖಪಾಲರಿಗೆ ಸಲ್ಲಿಸಲಾಗಿರುತ್ತದೆ. ಇನ್ನುಳಿದ ಪ್ರಸ್ತಾವನೆಗಳನ್ನು ಮಹಾಲೇಖಪಾಲರಿಗೆ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ. 2006ರ ನಂತರ ನೇಮಕಗೊಂಡ ಸಿಬ್ಬಂದಿಗಳು ನೂತನ ಪಿಂಚಣಿ ಯೋಜನೆಗೆ (ಎನ್.ಪಿ.ಎಸ್) ಒಳಪಡುತ್ತಾರೆ.

ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ 141 ವಿಶೇಷ ಶಾಲೆಗಳಲ್ಲಿ 10,055 ವಿಶೇಷ ಮಕ್ಕಳು ದಾಖಲಾಗಿದ್ದು, 1486 ವಿಶೇಷ ಶಿಕ್ಷಕರು ಹಾಗೂ 1648 ಶಿಕ್ಷಕೇತರ ಸಿಬ್ಬಂದಿಗಳು ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿ ಯೋಜನೆಯಡಿ ವಿಕಲತೆವಾರು ಮಕ್ಕಳ ಹಾಗೂ ಶಿಕ್ಷಕರ ಮಾಹಿತಿಯು ಈ ಕೆಳಕಂಡಂತಿದೆ.

| ಕ್ರ ಸಂ | ವಿಕಲತೆವಾರು | ಶಾಲೆಗಳ ಸಂಖ್ಯೆ | ಮಕ್ಕಳ ಸಂಖ್ಯೆ | ಶಿಕ್ಷಕರು | ಶಿಕ್ಷಕೇತರ |
|---|---|---|---|---|---|
| 1 | ದೃಷ್ಟಿದೋಷವುಳ್ಳ ಮಕ್ಕಳ ಶಾಲೆ | 17 | 934 | 164 | 186 |
| 2 | ಶ್ರವಣದೋಷವುಳ್ಳ ಮಕ್ಕಳ ಶಾಲೆ | 41 | 3433 | 430 | 489 |
| 4 | ಬುದ್ಧಿಮಾಂದ್ಯ ಮಕ್ಕಳ ಶಾಲೆ | 83 | 5688 | 892 | 973 |
| | **ಒಟ್ಟು** | **141** | **10055** | **1486** | **1648** |

ಪ್ರಸ್ತುತ ನಿಯಮಗಳ ಅನ್ವಯ ಅಂಧ ಮಕ್ಕಳಿಗೆ 1:12, ಶ್ರವಣದೋಷವುಳ್ಳ ಮಕ್ಕಳಿಗೆ 1:10, ಬುದ್ಧಿಮಾಂದ್ಯ ಮಕ್ಕಳಿಗೆ 1:7 ಅನುಪಾತದಂತೆ ಶಿಕ್ಷಕರ ಸೇವೆಯನ್ನು ಪಡೆಯಲಾಗಿರುತ್ತದೆ.

ಸರ್ಕಾರದ ವತಿಯಿಂದ ಮೈಸೂರಿನಲ್ಲಿ ಅಂಧ ಹಾಗೂ ಶ್ರವಣದೋಷವುಳ್ಳ ವಿಶೇಷ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಆರ್.ಸಿ.ಐ.ನಿಂದ ಅನುಮೋದಿತ ವಿಶೇಷ ಡಿ.ಎಡ್ (ಅಂಧ ಮತ್ತು ಶ್ರವಣದೋಷದಲ್ಲಿ ವಿಶೇಷ ಶಿಕ್ಷಣ) ಶಿಕ್ಷಣದ ತರಬೇತಿಯನ್ನು ಎರಡು ವರ್ಷಗಳ ಅವಧಿಗೆ ಪ್ರತಿ ವರ್ಷ ತಲಾ 25 ರಂತೆ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು 34 ಖಾಸಗಿ ಸಂಸ್ಥೆಗಳು ಆರ್.ಸಿ.ಐ ಅನುಮೋದಿತ ವಿವಿಧ ಬಗೆಯ ವಿಶೇಷ ಶಿಕ್ಷಣದ ತರಬೇತಿ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಅಂಧ ಮಕ್ಕಳ ವಿಶೇಷ ಶಿಕ್ಷಣದಲ್ಲಿ ಬಿ.ಎಡ್. ತರಬೇತಿಯನ್ನು ನೀಡಲು ಸರ್ಕಾರಿ ಕೇಂದ್ರಗಳು ಇಲ್ಲದೇ ಇರುವುದರಿಂದ ಅಂಧ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಇಲಾಖೆಯಿಂದಲೇ ಮೈಸೂರಿನ ಅಂಧ ಮತ್ತು ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ವಿಶೇಷ ಬಿ.ಎಡ್. ಶಿಕ್ಷಣ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲನೆಯಲ್ಲಿರುತ್ತದೆ.

**ಸಂಖ್ಯೆ: ಮಮಇ 146 ಪಿಹೆಚ್‌ಪಿ 2023**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು